ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 68/2024
ಡಿ.ಡಬ್ಲ್ಯೂ ಃ 02

ದಿನಾಂಕಃ 23-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದ

2021, ಆಗಸ್ಟ್ ತಿಂಗಳಿನಿಂದ ನನಗೆ ಪ್ರಕರಣದ ಬಗ್ಗೆ ಮಾಹಿತಿ ಇರುತ್ತದೆ. ಹಿಂದಿನ ಚೀಫ್ ಆಫೀಸರ್ ನನಗೆ ದಾವೆಯ ಬಗ್ಗೆ ಮಾಹಿತಿ ಕೊಟ್ಟಿರುತ್ತಾರೆ ಹಾಗೂ ದಾಖಲೆಗಳನ್ನು ಸಹ ನೋಡಿರುತ್ತೇನೆ. ಹಿಂದಿನ ಚೀಫ್ ಆಫೀಸರ್ ಹೆಸರು ಅರುಣ್. ಕೇಸ್ ವರ್ಕರ್ ಬಳಿ ಎಲ್ಲಾ ದಾಖಲೆಗಳು ಇರುತ್ತವೆ. ಪ್ರತಿಯೊಂದು ದಾಖಲೆಗಳು ನಮ್ಮ ಕಛೇರಿಯಲ್ಲೇ ಇರುತ್ತವೆ ಎಂದು ನುಡಿಯುತ್ತಾರೆ. ನಾನು ಕಛೇರಿಯಲ್ಲಿ ಇರುವ ದಾಖಲೆಗಳನ್ನು ನೋಡಿ ಸಾಕ್ಷ್ಯ ಹೇಳುತ್ತಿದ್ದೇನೆ. ನ್ಯಾಯಾಲಯದಿಂದ ಸಮನ್ಸ್ ಬಂದಾಗ ಕೇಸ್ ವರ್ಕರ್ ರವರನ್ನು ಕರೆದು ದಾಖಲೆಗಳನ್ನು ಪರಿಶೀಲಿಸಿ ಅದರ ಆಧಾರದ ಮೇಲೆ ಸಾಕ್ಷ್ಯ ನೀಡುತ್ತೇವೆ ಎಂದು ನುಡಿಯುತ್ತಾರೆ.

2. ನನಗೆ ಈ ಪ್ರಕರಣದಲ್ಲಿ ಚಂದ್ರಶೇಖರ ಎಂಬ ಕೇಸ್ ವರ್ಕರ್ ಮಾಹಿತಿ ಕೊಟ್ಟಿರುತ್ತಾರೆ. ಕೇಸಿಗೆ ಸಂಬಂದಪಟ್ಟಂತೆ ಸಾರ್ವಜನಿಕರು ಕೊಟ್ಟ ದೂರನ್ನು, ಆರ್.ಟಿ.ಸಿ ಯನ್ನು, ನಕಾಶೆಯನ್ನು ಪರಿಶೀಲಿಸಿರುತ್ತೇನೆ. ಹಾಗೂ ನ್ಯಾಯಾಲಯದಲ್ಲಿ ಹಾಜರುಪಡಿಸಿದಂತಹ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ.

3. ವಾದಿ ಈ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ದಾವಾ ಎ ಶೆಡ್ಯೂಲ್ ಸ್ಥಳ ವಾದಿಯರ ಖಾಸಗಿ ಸ್ಥಳವಾಗಿದ್ದು, ಬಿ ಶೆಡ್ಯೂಲ್ ಸ್ಥಳ ಸರ್ವೆ ನಂಬ್ರ 172/1 ಎ ಸರಕಾರಿ ಸ್ಥಳವಾಗಿದ್ದು, ಎರಡೂ ಸ್ಥಳಗಳಿಗೆ ನಾನು ಭೇಟಿ ಕೊಟ್ಟಿರುತ್ತೇನೆ. 2021, ಆಗಸ್ಟ್ ನಲ್ಲಿ ನಾನು ಹೋಗಿರುತ್ತೇನೆ. ದಾವಾ ಆಸ್ತಿಗಳನ್ನು ಅಭಿವೃದ್ಧಿ ಪಡಿಸಬೇಕು ಎಂದು ಕೌನ್ಸಿಲರ್ ರವರು ಹಾಗೂ ಸಾರ್ವಜನಿಕರು ಹೇಳಿದ್ದರಿಂದ ನಾನು ಸ್ಥಳಕ್ಕೆ ಹೋಗಿರುತ್ತೇನೆ. ರಸ್ತೆ ಅಭಿವೃದ್ಧಿ ಹಾಗೂ ದಾರಿ ದೀಪ ಅಭಿವೃದ್ಧಿ ಪಡಿಸಬೇಕು ಎಂದು ಹೇಳಿದ್ದರು.

4. ನಾನು ಸ್ಥಳಕ್ಕೆ ಹೋಗುವ ಸಂದರ್ಭದಲ್ಲಿ ವಾದಿ ಸಲ್ಲಿಸಿದ ದಾವೆಯ ಬಗ್ಗೆ ಮಾಹಿತಿ ಇತ್ತು. ವಾದಿಗೆ ಲಿಖಿತ ನೋಟಿಸು ಕೊಟ್ಟು ಸ್ಥಳಕ್ಕೆ ಹೋಗಿರಲಿಲ್ಲ. ಸಾಕ್ಷಿ ಪುನಃ ವಾದಿಯೂ ಅರ್ಜಿ

ಕೊಟ್ಟು ಸ್ಥಳ ಪರಿಶೀಲನೆ ಮಾಡುವಂತೆ ಕೇಳಿಕೊಂಡಿದ್ದರು ಎಂದು ನುಡಿಯುತ್ತಾರೆ. ವಾದಿ ದಾವಾ ಸ್ಥಳದಲ್ಲಿ ಯಾವುದೇ ರಸ್ತೆ ಇಲ್ಲ, ಅಭಿವೃದ್ದಿ ಮಾಡಬೇಡಿ ಹಾಗೂ ಬೀದಿ ದೀಪದ ವ್ಯವಸ್ಥೆ, ಮಾಡಬೇಡಿ ಎಂದು ಅರ್ಜಿ ಸಲ್ಲಿಸಿರುತ್ತಾರಾ ಎಂದರೆ ಸಾಕ್ಷಿ ನಮಗೆ ವಾದಿ ಯಾವುದೇ ಅಭಿವೃದ್ದಿ ಕಾರ್ಯವನ್ನು ಮಾಡಲು ಬಿಡದೇ ಆತಂಕ ಮಾಡುತ್ತಾ ಇರುತಾರೆ ಎಂದು ನುಡಿಯುತ್ತಾರೆ. ನಾವು ಸ್ಥಳಕ್ಕೆ ಹೋದ ಬಗ್ಗೆ ದಾಖಲೆಗಳಲ್ಲಿ ಕಂಡು ಬರುವುದಿಲ್ಲ. ಸಾಕ್ಷಿ ನಮ್ಮ ಕೆಲಸದ ನಿಮಿತ್ತ ನಾವು ಸ್ಥಳಕ್ಕೆ ಹೋಗಬಹುದು ಎಂದು ನುಡಿಯುತ್ತಾರೆ.

5. ಸ್ಥಳಕ್ಕೆ ಹೋದಾಗ ನಾವು ಯಾವುದೇ ಮಹಜರು ಮಾಡಿರುವುದಿಲ್ಲ ಹಾಗೂ ಹೇಳಿಕೆ ಪಡೆದಿರುವುದಿಲ್ಲ. ರಸ್ತೆ ತೆರವು ಕಾರ್ಯವನ್ನು ಮಾಡಿರುತ್ತೇವೆ. ರಸ್ತೆ ಮೇಲೆ ತಡೆ ಒಡ್ಡಿದ್ದರಿಂದ ನಮ್ಮ ಸಿಬ್ಬಂದಿಯವರನ್ನು ಕರೆದುಕೊಂಡು ಹೋಗಿ ತೆರವುಗೊಳಿಸಿರುತ್ತೆವೆ ಎಂದು ನುಡಿಯುತ್ತಾರೆ. ನಾವು ಸದರಿ ಕಾರ್ಯಾಚರಣೆಯನ್ನು ದಾವಾ ಬಿ ಶೆಡ್ಯೂಲ್ ಸರಕಾರಿ ಸ್ಥಳದಲ್ಲಿ ನಡೆಸಿರುತ್ತೇವೆ. ಆ ಸಮಯದಲ್ಲಿ ದಾವೆಯಲ್ಲಿ ತಡೆಯಾಜ್ಞೆ ಇದ್ದ ಬಗ್ಗೆ ಮಾಹಿತಿ ಇತ್ತಾ ಎಂದರೆ ಸಾಕ್ಷಿ, ಆ ಸಮಯದಲ್ಲಿ ತಡೆಯಾಜ್ಞೆ ತೆರವುಗೊಂಡಿತ್ತು ಎಂದು ನುಡಿಯುತ್ತಾರೆ. ನ್ಯಾಯಾಲಯದ ಆದೇಶವನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ದಾವಾ ಸ್ವತ್ತಿನ ಕಾರ್ಯಾಚರಣೆಗೆ ಬರುತ್ತೇವೆ ಎಂದು ವಾದಿಗೆ ನೋಟೀಸು ಕೊಡಲು ಪ್ರಯತ್ನಿಸಿರುವುದಿಲ್ಲ, ನೊಟೀಸು ಕೊಟ್ಟಿರುವುದಿಲ್ಲ.

6. ಕಛೇರಿಯಲ್ಲಿ ಇರುವಂತಹ ದಾಖಲೆಗಳಲ್ಲಿ ಕಾರ್ಯಾಚರಣೆ ನಡೆಸಿದ ಬಗ್ಗೆ ದಾಖಲೆಗಳು ಇರುತ್ತವೆ. ಆ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಮುನ್ಸಿಪಾಲಿಟಿ ಕಾಯ್ದೆ ಪ್ರಕಾರ ತಗಾದೆ ಇದ್ದ ಸ್ಥಳಕ್ಕೆ ಹೋಗಬೇಕಾದರೆ ಸಂಬಂದಪಟ್ಟವರಿಗೆ ನೋಟೀಸು ಕೊಟ್ಟು ಹೋಗಬೇಕು ಎಂದರೆ ಸಾಕ್ಷಿ ಆ ಸಮಯದಲ್ಲಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ತೆರವು ಆಗಿದ್ದರಿಂದ ಹೋಗಿರುತ್ತೇವೆ ಎಂದು ನುಡಿಯುತ್ತಾರೆ.

7. ದಾವಾ ಬಿ ಶೆಡ್ಯೂಲ್ ಆಸ್ತಿಯ ವಿಸ್ತೀರ್ಣ 1 ಎಕರೆ 26 ಸೆಂಟ್ಸ್ ಜಾಗ ಇರಬಹುದು. ಬಿ ಶೆಡ್ಯೂಲ್ ಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತಿರುತ್ತದೆ. ಬಿ ಶೆಡ್ಯೂಲ್ ಸ್ವತ್ತಿನ ಉತ್ತರಕ್ಕೆ ಕುರುಚಲು ಕಾಡು ಇರುತ್ತವೆ, ಅದು ಸರಕಾರದ ಜಮೀನು. ದಕ್ಷಿಣಕ್ಕೆ ಸರಕಾರಿ ರಸ್ತೆ ಇರುತ್ತದೆ. ಅದರ ಅಗಲ 15 ಅಡಿ. ಪಶ್ಚಿಮಕ್ಕೆ ಬಿ ಶೆಡ್ಯೂಲ್ ಸ್ವತ್ತೇ ಇರುತ್ತದೆ. ಪೂರ್ವಕ್ಕೆ ವಾದಿಯವರ ಆಸ್ತಿ ಇರುತ್ತದೆ. ನನ್ನ ಪ್ರಕಾರ ನಾನು ಹೇಳುವ ಸಾರ್ವಜನಿಕ ರಸ್ತೆ ಸರ್ವೆ ನಂಬ್ರ 172/1 ಎ, 1 ಎಕರೆ 26 ಸೆಂಟ್ಸ್

ಆಸ್ತಿಯ ಒಂದು ಭಾಗದಲ್ಲಿ ರಸ್ತೆ ಹಾದು ಹೋಗುತ್ತದೆ ಎಂದು ನುಡಿಯುತ್ತಾರೆ. ಆ ರಸ್ತೆ ಪಟ್ಟಣ ಪಂಚಾಯತಿ ರಸ್ತೆಯಾಗಿರುತ್ತದೆ. ಆ ರಸ್ತೆಯನ್ನು ಪಟ್ಟಣ ಪಂಚಾಯತಿಯವರು ನಿರ್ಮಾಣ ಮಾಡಿರುತ್ತಾರೆ. ಯಾವಾಗ ನಿರ್ಮಾಣ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿ ಹಿಂದಿನಿಂದಲೂ ರಸ್ತೆ ಇತ್ತು ಎಂದು ನುಡಿಯುತ್ತಾರೆ.

8. ಸರ್ವೆ ನಂಬ್ರ 172/1 ಎ ರಲ್ಲಿ ಪಟ್ಟಣ ಪಂಚಾತಿಯವರು ರಸ್ತೆ ನಿರ್ಮಿಸಿದ ಬಗ್ಗೆ ದಾಖಲೆ ಇರುತ್ತದೆ. 2021 ರ ನಂತರ ನಾನು ಆ ದಾಖಲೆಯನ್ನು ನೋಡಿರುತ್ತೇನೆ. ಸಾಮಾನ್ಯ ಸಭೆಯ ನಿರ್ಣಯದಲ್ಲಿ ದಾಖಲೆ ಇದ್ದ ಬಗ್ಗೆ ಕಂಡು ಬಂದಿರುತ್ತದೆ. ಸಾಮಾನ್ಯ ಸಭೆಯ ನಿರ್ಣಯ ದಾಖಲೆಗಳಯನ್ನು ನೋಡಿಕೊಂಡು ಸರ್ವೆ ನಂಬ್ರ.172/1 ಎ ರಲ್ಲಿ ಪಟ್ಟಣ ಪಂಚಾಯತಿಯವರು ರಸ್ತೆ ನಿರ್ಮಿಸಿರುತ್ತಾರೆ ಎಂದು ಹೇಳುತ್ತಿರುತ್ತೇನೆ ಎಂದರೆ ಸರಿ. ಯಾವ ವರ್ಷ ನಿರ್ಣಯ ಆಗಿರುತ್ತದೆ ಎಂದು ದಾಖಲೆಯಲ್ಲಿ ಇರುತ್ತದೆ, ನನಗೆ ಈಗ ನೆನಪಿಗೆ ಬರುತ್ತಿಲ್ಲ ಎಂದು ನುಡಿಯುತ್ತಾರೆ.

9. ವಾದಿ ಈ ಪ್ರಕರಣದಲ್ಲಿ ಏನು ಸಾಧಿಸುತ್ತಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ನಮ್ಮ ಪಟ್ಟಣ ಪಂಚಾಯತಿಯಿಂದ ಸಲ್ಲಿಸಿದ ಲಿಖಿತ ತಕರಾರು ಹೇಳಿಕೆಯ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನಾನು ಹೇಳಿದಂತೆ ಪಟ್ಟಣ ಪಂಚಾಯತಿಯಲ್ಲಿ ನಿರ್ಣಯ ಆಗಿದ್ದರೇ ಅದು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಒಂದು ದೊಡ್ಡ ನಿರ್ಣಯದ ದಾಖಲೆ ಎಂದರೆ ಸರಿ. ನಾನು ನಿರ್ಣಯ ಇದ್ದ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುವುದಿಲ್ಲ. ಪಟ್ಟಣ ಪಂಚಾಯತಿ ಸಲ್ಲಿಸಿದ ಲಿಖಿತ ತಕರಾರಿನಲ್ಲಿ ನಿರ್ಣಯದ ಬಗ್ಗೆ ಕಾಣಿಸಿದ ಬಗ್ಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಸಮ್ಮನಿರುತ್ತಾರೆ. ಪಟ್ಟಣ ಪಂಚಾಯತಿಯಲ್ಲಿ ಯಾವುದೇ ನಿರ್ಣಯ ಇಲ್ಲದೇ ಇದ್ದರೂ ಕೂಡ ವಾದಿಯ ಜಾಗದಲ್ಲಿ ಬಲಾತ್ಕಾರವಾಗಿ ಹಾಗೂ ಕಾನೂನು ವಿರುದ್ಧವಾಗಿ ಪ್ರತಿವಾದಿಗಳು ಹೊಸ ರಸ್ತೆ ನಿರ್ಮಿಸಲು ಪ್ರಯತ್ನಿಸುತ್ತಿರುತ್ತಾರೆ ಎಂದು ವಾದಿ ಸಾಧನೆ ಮಾಡುತ್ತಿರುವ ವಿಚಾರ ನನಗೆ ಗೊತ್ತಿರುತ್ತದೆ.

10. ಆ ನಿರ್ಣಯವನ್ನು ಏಕೆ ಹಾಜರುಪಡಿರುವುದಿಲ್ಲ ಎಂದರೆ ಸಾಕ್ಷಿ ಸಮ್ಮನಿರುತ್ತಾರೆ. ನಾನು ಆ ನಿರ್ಣಯವನ್ನು ಆಧರಿಸಿಕೊಂಡು ದಾವಾ ಬಿ ಶೆಡ್ಯೂಲ್ ನಲ್ಲಿ  ರಸ್ತೆ ಇರುತ್ತದೆ ಎಂದು ಹೇಳುತ್ತಿರುತ್ತೇನೆ ಎಂದರೆ ಸರಿ. ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ವಾದಿಯರು ಕೇವಲ 70 ಸೆಂಟ್ಸ್ ಗೆ ಸಂಬಂದಪಟ್ಟಂತೆ ನಿವೃತ್ತಿ ಕೇಳುತ್ತಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಒಟ್ಟು ಆಸ್ತಿಯ ಉಳಿಕೆ ಸ್ವತ್ತಿಗೆ ಸಂಬಂದಪಟ್ಟಂತೆ ವಾದಿಯರು ಯಾವುದೇ

ನಿವೃತ್ತಿ ಕೇಳುತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ಹೇಳಿದ 70 ಸೆಂಟ್ಸ್ ಬಿ ಶೆಡ್ಯೂಲ್ ಸ್ವತ್ತಿನ ಮೇಲ್ಮೈ ಬಗ್ಗೆ ಏನು ಸಾಧಿಸುತ್ತಿದ್ದಾರೆ ಎಂದರೆ ಸಾಕ್ಷಿ ನನ್ನ ಅನುಭವದ ಹಕ್ಕು, ನಮಗೆ ಸೇರಬೇಕು ಎಂದು ಸಾಧಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಮೇಲ್ಮೈ ಎಂದರೆ ಅವರು ಸ್ವಲ್ಪ ಕೃಷಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

11. ದಾವಾ ಬಿ ಶೆಡ್ಯೂಲ್ ನ 70 ಸೆಂಟ್ಸ್ ಜಾಗದಲ್ಲಿ ತೆಂಗು, ಗೇರು ಹಾಗೂ ಸಪೋಟ ಮರಗಳು ಇರುತ್ತವೆ ಎಂದರೆ ಸಾಕ್ಷಿ ಕಾಟು ಮರಗಳು ಹಾಗೂ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಮೇಲೆ ಹೇಳಿದ ಬಿ ಶೆಡ್ಯೂಲ್ ಆಸ್ತಿಯ ದಕ್ಷಿಣಕ್ಕೆ ಇರುವ ರಸ್ತೆ ಇದೇ ರಸ್ತೆ ಆಗಿರುತ್ತದೆ. ನಾನು ಹೇಳುವಂತ ರಸ್ತೆ ಹಾಗೂ ದಕ್ಷಿಣದ ಗಡಿಯಲ್ಲಿ ಮಣ್ಣಿನ ಧರೆ ಇರುತ್ತದೆ ಎಂದರೆ ಸರಿ. ಸಾಕ್ಷಿ ಪುನಃ ಧರೆ ಇರುವುದಿಲ್ಲ, ನೀರು ಹರಿಯುವ ತೋಡು ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ದಕ್ಷಿಣಕ್ಕೆ ಅಲ್ಲ, ಪೂರ್ವಕ್ಕೆ ಎಂದು ನುಡಿಯುತ್ತಾರೆ. ತೋಡಿನ ಪಕ್ಕ ದಂಡೆ ಇರುತ್ತದೆ, ಧರೆ ಇರುವುದಿಲ್ಲ. ದಂಡೆ 2 ಅಡಿ ಎತ್ತರದಲ್ಲಿ ಇರುತ್ತದೆ. ದಾವಾ ಬಿ ಶೆಡ್ಯೂಲ್ ಸ್ವತ್ತು ಹಾಗೂ ದಕ್ಷಿಣದಲ್ಲಿ ಇರುವ 4 ನೇ ಪ್ರತಿವಾದಿ ಬಾಬ್ತು ರಸ್ತೆಯ ಮಧ್ಯದಲ್ಲಿ ಧರೆ ಇರುತ್ತದಾ ಎಂದರೆ ಸಾಕ್ಷಿ ಧರೆ ಇರುವುದಿಲ್ಲ, ರಸ್ತೆ ಹಾಗೂ ಬಿ ಶೆಡ್ಯೂಲ್ ಸ್ವತ್ತಿನ ನಡುವೆ ನೀರಿನ ತೋಡು ಇರುತ್ತದೆ.

12. ನೀರಿನ ತೋಡಿನ ಅಗಲ 4 ಮೀಟರ್ ಇರಬಹುದು. ನೀರಿನ ತೋಡಿನ ಎರಡೂ ಕಡೆ ದಂಡೆ ಇರುತ್ತದೆ. ಬಿ ಶಡ್ಯೊಲ್ ಸ್ವತ್ತು ಹಾಗೂ 4 ನೇ ಪ್ರತಿವಾದಿಯ ರಸ್ತೆ ಇರುವ ಮಧ್ಯದಲ್ಲಿ ನೀರಿನ ತೋಡು ಇರುವ ಬಗ್ಗೆ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಕಾಣಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀರಿನ ತೋಡು ದಾವಾ ಬಿ ಶೆಡ್ಯ್ಯಾಲ್ ಸ್ವತ್ತಿನ ದಕ್ಷಿಣಕ್ಕೆ ಇದೆ ಎಂದು ಇದೇ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಪಟ್ಟಣ ಪಂಚಾಯತಿಯಿಂದ ಯಾವುದೇ ರಸ್ತೆ ನಿರ್ಮಾಣ ಹಾಗೂ ಅಭಿವೃದ್ಧಿ ಮಾಡಿದರೆ ಅದಕ್ಕೆ ಸಂಬಂದಪಟ್ಟಂತೆ ಪಟ್ಟಣ ಪಂಚಾಯತಿಯಲ್ಲಿ ದಾಖಲೆ ಇರುತ್ತದೆ ಎಂದರೆ ಸರಿ.

13. ಪಟ್ಟಣ ಪಂಚಾಯತಿಯ ಕಾಮಗಾರಿಗಳು ಟೆಂಡರ್ ಮುಖಾಂತರ ಆಗುವ ಕಾಮಗಾರಿಗಳು ಎಂದರೆ ಸರಿ. ದಾವಾ ಬಿ ಶೆಡ್ಯೂಲ್ ನಲ್ಲಾಗಲಿ ಅಥವಾ ದಾವಾ ಬಿ ಶೆಡ್ಯೂಲ್ ದಕ್ಷಿಣಕ್ಕಾಗಲಿ ರಸ್ತೆ ಅಭಿವೃದ್ಧಿ ಪಡಿಸಿದರೆ ಆ ಬಗ್ಗೆ ದಾಖಲೆ ಇರುತ್ತದೆ ಎಂದರೆ ಸರಿ. ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಾಗಲಿ ಅಥವಾ ಬಿ ಶೆಡ್ಯೂಲ್ ನ ದಕ್ಷಿಣ ದಿಕ್ಕಿನಲ್ಲಿರುವ ರಸ್ತೆಯನ್ನು ಅಭಿವೃದ್ಧಿ

ಪಡಿಸಿದ ಬಗ್ಗೆ ದಾಖಲೆಗಳು ಕಂಡು ಬರುವುದಿಲ್ಲ ಎಂದರೆ ಸರಿ. ಸಾಕ್ಷಿ ಅಭಿವೃದ್ದಿ ಪಡಿಸಲು ಹೋದಾಗಲೇ ಈ ತಕರಾರು ಬಂದಿರುತ್ತದೆ ಎಂದು ನುಡಿಯುತ್ತಾರೆ.

14. ಸರ್ವೆ ನಂಬ್ರ 172/1 ಎ ಯಲ್ಲಿ ಪಟ್ಟಣ ಪಂಚಾಯತಿ ರಸ್ತೆ ಇದ್ದ ಬಗ್ಗೆ ಯಾವುದಾದರು ದಾಖಲೆ ಇದೆಯಾ ಎಂದರೆ ಸಾಕ್ಷಿ ಹಿಂದೆ ಮಣ್ಣಿನ ರಸ್ತೆ ಇತ್ತು ಎಂದು ನುಡಿಯುತ್ತಾರೆ. ಮಣ್ಣಿನ ರಸ್ತೆ ಇದ್ದ ಬಗ್ಗೆ ದಾಖಲೆಗಳಲ್ಲಿ ಕಂಡು ಬರುತ್ತದೆ. ದಾಖಲೆಗಳನ್ನು ಹಾಜರುಪಡಿಸಬಹುದು ಎಂದು ನುಡಿಯುತ್ತಾರೆ. 2013 ರಲ್ಲಿ ದಾವಾ ಬಿ ಶೆಡ್ಯೂಲ್ ನಲ್ಲಿ ರಸ್ತೆ ಮಾಡಲು ಹೋದಾಗ ವಾದಿ ಆಕ್ಷೇಪಿಸಿರುತ್ತಾರೆ. ಆ ರೀತಿ ರಸ್ತೆ ನಿರ್ಮಾಣ ಮಾಡಲು ಮುನ್ಸಿಪಾಲಿಟಿಯವರು ಹೋಗಿರುತ್ತಾರೆ. ದಿನಾಂಕ 11-07-2013 ರಲ್ಲಿ ಆ ರೀತಿ ರಸ್ತೆ ನಿರ್ಮಾಣ ಮಾಡಲು ಹೋಗಿರುತ್ತೇವೆ ಎಂದರೆ ಸರಿ. ಪಟ್ಟಣ ಪಂಚಾಯತಿಯ ಕೆಲ ಅಧಿಕಾರಿಗಳು, ಸದಸ್ಯರು, ಪ್ರತಿವಾದಿ 2 ಮತ್ತು 3 ರವರು ಹೋಗಿರುತ್ತಾರೆ ಎಂದರೆ ಸರಿ.

15. ಆಗ ವಾದಿ ಯಾವುದೇ ಬಲಾತ್ಕಾರ ಮಾಡಬಾರದು ಎಂದು ಆಕ್ಷೇಪಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 08-01-2015 ರಂದು ಪಟ್ಟಣ ಪಂಚಾಯತಿ ಅಧಿಕಾರಿಗಳು ಹಾಗೂ 2 ಮತ್ತು 3 ನೇ ಪ್ರತಿವಾದಿಗಳು ಪುನಃ ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ಕೊಡಲು ಹೋಗಿರುತ್ತಾರೆ ಎಂದರೆ ಸಾಕ್ಷಿ ಆಗ ಅಳತೆ ಮಾಡಲು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸಾರ್ವಜನಿಕರು ಪಟ್ಟಣ ಪಂಚಾಯತಿಗೆ ಕೊಟ್ಟಂತ ದೂರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ನಿಡಿ.21 ನ್ನು ತೋರಿಸಿ ಇದೇ ದಾಖಲೆ ಎಂದು ನುಡಿಯುತ್ತಾರೆ. ನಿಡಿ.21 ನ್ನು ಆಧರಿಸಿಕೊಂಡು ದಾವಾ ಬಿ ಶೆಡ್ಯೂಲ್ ರಸ್ತೆಯನ್ನು ಅಭಿವೃದ್ದಿ ಪಡಿಸಲು ಹೋಗಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

16. ದಾವಾ ಎ ಶೆಡ್ಯೂಲ್ ನ ಪೂರ್ವ ದಿಕ್ಕಿನಲ್ಲಿ ಅಚ್ಯುತ ಪೂಜಾರಿ ಬಿನ್ ನಾರಾಯಣ ಪೂಜಾರಿ ಬಾಬ್ತು ಆಸ್ತಿಗಳು ಇರುತ್ತವೆ ಎಂದರೆ ಸರಿ. ಈಗ ರಸ್ತೆ ಇರುವುದಿಲ್ಲ, ನಾವು ಪ್ರಶ್ನಿತ ರಸ್ತೆಯನ್ನು ಅಭಿವೃದ್ದಿ ಪಡಿಸಲು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಅಚ್ಯುತ ಪೂಜಾರಿಯವರು ಪಟ್ಟಣ ಪಂಚಾಯತಿಯ ಮಾಜಿ ನಾಮ ನಿರ್ದೇಶಿತ ಸದಸ್ಯರಿದ್ದು, ಆ ಪ್ರದೇಶದಲ್ಲಿ ರಾಜಕೀಯ ಮುಖಂಡರು ಇರುತ್ತಾರೆ ಎಂದರೆ ಸರಿ. 2013 ರಲ್ಲಿ ಅವರು ದಾವಾ ಸ್ವತ್ತಿನ ಪೂರ್ವದಲ್ಲಿದ್ದ ರಸ್ತೆ ಸಂಪರ್ಕ ಇಲ್ಲದ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿಯವರು ತಾನು ಖರೀದಿಸಿದ ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳಿಗೆ ಹೋಗಲು

ದಾವಾ ಎ ಮತ್ತು ಬಿ ಶೆಡ್ಯೂಲ್ ಗಳಲ್ಲಿ ಹೊಸದಾಗಿ ರಸ್ತೆ ಮಾಡಿಕೊಳ್ಳಲು ಪ್ರಯತ್ನಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

17. ಆ ವಿಚಾರವಾಗಿ ವಾದಿ ಸದರಿ ಅಚ್ಯುತ ಪೂಜಾರಿ ಯವರ ವಿರುದ್ಧ ದಾವಾ ಮಾಡಿದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಆತನಿಗೆ ದಾವಾ ಎ ಮತ್ತು ಬಿ ಶೆಡ್ಯೂಲ್ ಸ್ವತ್ತಿನಲ್ಲಿ ರಸ್ತೆ ಮಾಡಲು ಆಗದೇ ಇರುವ ಕಾರಣ ಆತ ಪಟ್ಟಣ ಪಂಚಾಯತಿ ಮುಖಾಂತರ ಎ ಮತ್ತು ಬಿ ಶೆಡ್ಯೂಲ್ ಸ್ವತ್ತಿನಲ್ಲಿ ರಸ್ತೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸಾಕ್ಷಿ ಸಾರ್ವಜನಿಕರ ಉದ್ದೇಶಕ್ಕಾಗಿ ಪ್ರಯತ್ನಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅಚ್ಯುತ ಪೂಜಾರಿಯವರಿಗೆ ತಾನು ದಾವಾ ಎ ಶೆಡ್ಯೂಲ್ ನ ಪೂರ್ವಕ್ಕೆ ಖರೀದಿಸಿದ ಸ್ಥಳಗಳಿಗೆ ಹೊಸದಾಗಿ ರಸ್ತೆ ಮಾಡಿಸಿ ಹೆಚ್ಚಿನ ಬೆಲೆಗೆ ಮಾರಿಕೊಳ್ಳುವ ಉದ್ದೇಶ ಇರುತ್ತದೆ ಎಂದರೆ ಸಾಕ್ಷಿ ಗೊರಾತಿತಲ್ಲ ಎಂದು ನುಡಿಯುತ್ತಾರೆ. ಅಚ್ಯುತ ಪೂಜಾರಿ ರಿಯಲ್ ಎಸ್ಟೇಟ್ ಉದ್ಯಮಿ ಎಂದರೆ ನನಗೆ ಗೊತ್ತಿಲ್ಲ.

18. 2019 ನೇ  ಸಾಲಿನಲ್ಲಿ ಪಟ್ಟಣ ಪಂಚಾಯತಿಯವರು ದಾವಾ ಎ ಮತ್ತು ಬಿ ಶೆಡ್ಯೂಲ್ ಸ್ವತ್ತಿನ ಮೇಲೆ ಮಣ್ಣನ್ನು ಸಾಗಾಟ ಮಾಡಿ ಮಣ್ಣನ್ನು ರಸ್ತೆ ಮೇಲೆ ಹಾಕಲು ಪ್ರಯತ್ನಿಸಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ವಿಚಾರ ದಾಖಲೆಗಳಲ್ಲಿ ಕಂಡು ಬರುವುದಿಲ್ಲ. ಆಗ ರಸ್ತೆ ಮಾಡಲು ಪ್ರಯತ್ನಿಸಿರುತ್ತಾರೆ. ಆಗ ನ್ಯಾಯಾಲಯ ಎ ಮತ್ತು ಬಿ ಶೆಡ್ಯೂಲ್ ಗೆ ಸಂಬಂದಪಟ್ಟಂತೆ ತಡೆಯಾಜ್ಞೆ ನೀಡಿದ್ದು ಜಾರಿಯಲ್ಲಿತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಡಿ.21 ನ್ನು ಅಚ್ಯುತ ಪೂಜಾರಿರವರು ಸ್ವ ಉದ್ದೇಶದಿಂದ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸಾರ್ವಜನಿಕ ಉದ್ದೇಶದಿಂದ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 2 ಹಾಗೂ 3, ಹಾಗೂ ಪಟ್ಟಣ ಪಂಚಾಯತಿಯವರು ಅಚ್ಯುತ ಪೂಜಾರಿ ಹಾಗೂ ಆತನ ಬೆಂಬಲಿಗರ ಒತ್ತಾಸೆಗೆ ಬಲಿಯಾಗಿ ಬಲಾತ್ಕಾರವಾಗಿ ರಸ್ತೆ ನಿರ್ಮಿಸಲು ಹೊರಟಿರುತ್ತೇವೆ ಎಂದರೆ ಸರಿಯಲ್ಲ.

ಈ ಸಂದರ್ಭದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

ಓ.ಹೇ.ಕೇ.ಸ.ಇದೆ                ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ